ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ / DATE: 19/02/2020

# ಪರಿಷತ್‌ನಲ್ಲಿ ದೇಶದ್ರೋಹ, ಗೋಲಿಬಾರ್‌ನದ್ದೇ ಸದ್ದು

**ವಿಧಾನಪರಿಷತ್:** ಮಂಗಳೂರು ಗೋಲಿಬಾರ್‌ಗೆ ಕಾರಣ ಏನು? ಗೋಲಿಬಾರ್ ಮುನ್ನ ಹಾಗೂ ನಂತರ ಕೈಗೊಂಡ ಹಾಗೂ ಕೈಗೊಳ್ಳಬೇಕಾದ ಕ್ರಮದ ಕುರಿತು ವಿವರಣೆ ನೀಡಿ ಎಂದು ಪರಿಷತ್ ಪ್ರತಿಪಕ್ಷ ನಾಯಕ ಎಸ್.ಆರ್.ಪಾಟೀಲ್ ಒತ್ತಾಯಿಸಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬ ವಿಚಾರವಾಗಿ ಪ್ರತಿಪಕ್ಷದ ನಿಲುವಳಿ ಸೂಚನೆ ಅಡಿ ಗೃಹಸಚಿವ ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲಿ ಮಾತನಾಡಿ, ಸಿಎಎ, ಎನ್‌ಆರ್‌ಸಿಯಂತಹ ಸೂಕ್ಷ್ಮ ವಿಚಾರದಲ್ಲಿ ಗೋಲಿಬಾರ್ ಮಾಡಬಾರದಾಗಿತ್ತು. ಲಾಠಿಚಾರ್ಜ್‌ನಿಂದ ಅಮಾಯಕರಿಗೆ ತೊಂದರೆಯಾಗಿದೆ. ಗೋಲಿಬಾರ್‌ನಲ್ಲಿ ಇಬ್ಬರು ಅಮಾಯಕರ ಸಾವಾಗಿದೆ. ಇದೆಲ್ಲ ಬೇಕಾಗಿಯೇ ನಡೆದಿದೆ ಎಂದರು.

ಆಸ್ಪತ್ರೆ ಐಸಿಯುಗೆ ಬೂಟ್ ಕಾಲಿನಲ್ಲಿ ಪ್ರವೇಶ, ಆಸ್ಪತ್ರೆ ಆವರಣದಲ್ಲಿ ಅಶ್ರುವಾಯು ಸಿಡಿಸಿರುವುದು, ಅಂತರ್ಜಾಲ ಸಂಪರ್ಕ ಕಡಿತ, ಕರ್ಫ್ಯೂ ಜಾರಿಯಿಂದ ಪೊಲೀಸರ ದೌರ್ಜನ್ಯ ಎದ್ದು ಕಂಡಿದೆ. ಗೋಲಿಬಾರ್ ಪೂರ್ವ ನಿಯೋಜಿತ ಎನಿಸುತ್ತದೆ. ಪೊಲೀಸ್ ಆಯುಕ್ತರು ಎಫ್‌ಐಆರ್ ವರದಿ ವಿಭಿನ್ನವಾಗಿದ್ದು, ಅನುಮಾನ ತರಿಸುತ್ತಿದೆ. ಸತ್ತವರ ವಿರುದ್ಧವೇ ಎಫ್‌ಐಆರ್ ದಾಖಲಾಗಿದೆ. ಪ್ರಭಾವಿಗಳು ಇಲ್ಲಿ ಪೊಲೀಸರ ಮೇಲೆ ಪ್ರಭಾವ ಬೀರಿದ್ದಾರೆ. ಪೊಲೀಸರು ಸಿಡಿಸಿದ 8ರಲ್ಲಿ 7 ಗುಂಡು ಸೊಂಟದ ಮೇಲ್ಭಾಗಕ್ಕೆ ತಗುಲಿದೆ. ಕಾಲಿಗೆ ಗುಂಡು ಹೊಡೆಯಬೇಕಿತ್ತು. ಅಲ್ಲದೆ ಗೋಲಿಬಾರ್ ಮಾಡುವಾಗ ಕೆಲ ನಿಯಮಗಳಿವೆ. ಅದರ ಪಾಲನೆ ಆಗುತ್ತಿಲ್ಲ ಎಂದರು.

ಬಸವರಾಜ ಬೊಮ್ಮಾಯಿ ಮಾತನಾಡಿ, ಸರಕಾರ, ಪೊಲೀಸ್ ಇಲಾಖೆ ಉತ್ತರ ಕೊಡಲು ಸಮರ್ಥವಾಗಿದೆ. ಸಮರ್ಪಕವಾಗಿಯೇ ಕ್ರಿಯೆ ನಡೆದಿದೆ. ಇದರಿಂದಾಗಿ ಘಟನೆಗೆ ತದ್ವಿರುದ್ಧವಾಗಿ ನಿಲುವು ಕೈಗೊಳ್ಳಬಾರದು. ಆಸ್ತಿಪಾಸ್ತಿ ಹಾನಿ ಮಾಡುವವರಿಗೆ ಎಂತಹ ಕ್ರಮ ಕೈಗೊಳ್ಳಬೇಕೆಂದು ಕಾನೂನಿನಲ್ಲಿ ಸ್ಪಷ್ಟವಾಗಿದೆ. ನಾವು ಕಾನೂನು ಉಲ್ಲಂಘನೆ ಮಾಡಿದ್ದರೆ ತಿಳಿಸಿ, ಉತ್ತರ ಕೊಡುತ್ತೇವೆ. ತಪ್ಪಿದ್ದರೆ ಸರಿಪಡಿಸಿಕೊಳ್ಳುತ್ತೇವೆ ಎಂದರು.



> ಬೀದರ್‌ನ ಶಾಹೀನ್ ಶಾಲೆಯಲ್ಲಿ ಸಿಎಎ ವಿರುದ್ಧದ ನಾಟಕ ಮಾಡಿದರೆ ದೇಶದ್ರೋಹದ ಪ್ರಕರಣ ದಾಖಲಿಸಿದ್ದಾರೆ. ಇನ್ನು ಮುಂದೆ ಚಿತ್ರಕಲಾವಿದರು ಕಾರ್ಟೂನ್ ಬರೆದರೂ ಅವರ ಮೇಲೆ ಪ್ರಕರಣ ದಾಖಲಿಸಬಹುದು, ಕವಿಗಳು ಏನಾದರು ಕವಿತೆ ಬರೆದರೆ ಅವರ ಮೇಲೂ ಪ್ರಕರಣ ದಾಖಲಿಸುತ್ತಾರಾ. ಯಾವ ಪರಿಸ್ಥಿತಿ ಬಂದಿದೆ. ಯು.ಟಿ.ಖಾದರ್ ಮಾತನಾಡಿದರೆ ಅವರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಆದರೆ ಕಲ್ಲಡ್ಕ ಪ್ರಭಾಕರ್ ಭಟ್ ಮೇಲೆ ಏಕೆ ಪ್ರಕರಣ ದಾಖಲಿಸಿಲ್ಲ.
>
> **- ಎಸ್.ಆರ್.ಪಾಟೀಲ್**
>
> ಪರಿಷತ್ ಪ್ರತಿಪಕ್ಷ ನಾಯಕ